ಸವರಿ, ಪ್ರೀತಿ ತೋರಿಸಿದರು. ರಸ್ತೆಯಲ್ಲಿ ಹೋಗುತ್ತಿದ್ದಾಗ ಹಿಂತಿರುಗಿ ನೋಡುತ್ತೇನೆ, ಶ್ರೀಮಾತೆ ಬಾಗಿಲನ ಹತ್ತಿರ ನಿಂತು ನೋಡುತ್ತಿದ್ದಾರೆ. ಅವರ ಕಣ್ಣಲ್ಲಿ ನೀರು. ಎಷ್ಟು ಹೊತ್ತು ನಾನು ಕಾಣುತ್ತಿದ್ದೆನೋ ಅಷ್ಟೂ ಹೊತ್ತು, ನನ್ನನ್ನು ನೋಡುತ್ತ, ನಿಂತೇ ಇದ್ದರು.

ನಾನು ಆನಂದಭರಿತನಾಗಿ ರಸ್ತೆಯಲ್ಲಿಯೇ ನಡೆದು ಹೋಗುತ್ತಿದ್ದೆ. ಜಯರಾಂಬಾಟಿ ಮತ್ತು ಕಾಮಾರಪುಕುರ – ಎರಡನ್ನೂ ನೋಡಿಕೊಂಡು, ಬೇಲೂರುಮಠಕ್ಕೆ ಹೋಗುವುದೆಂದು ನಿಶ್ಚಯಿಸಿದೆ. ಬೇಲೂರುಮಠಕ್ಕೆ ಬಂದೆ. ಮಠದಲ್ಲಿ, ಅಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದ ಮಹಾರಾಜರು ಇರಲಿಲ್ಲ. ಸಾಧುಗಳು ನನ್ನನ್ನು ಮಹಾಪುರುಷ್ ಮಹಾರಾಜರ (ಸ್ವಾಮಿ ಶಿವಾನಂದರು) ಹತ್ತಿರ ಕರೆದುಕೊಂಡುಹೋದರು. ನನಗೆ ಮಾತೆಯವರ ಕೃಪೆ ದೊರೆತಿದೆ ಹಾಗೂ ನಾನು ಬ್ರಹ್ಮಚಾರಿಯಾಗಿ ಮಠದಲ್ಲಿ ಇರಲು ಇಷ್ಟಪಡುತ್ತೇನೆ ಎಂದು ತಿಳಿದು, ಮಠದಲ್ಲಿ ಇರಲು ನನಗೆ ಅವರು ಅನುಮತಿ ಕೊಟ್ಟರು. ನಾನು ಮಠದಲ್ಲಿ ಕೆಲವು ಕಾಲ ಬ್ರಹ್ಮಚಾರಿಯಾಗಿ ಇದ್ದೆ. ಆದರೆ ದೌರ್ಭಾಗ್ಯದಿಂದ ಬಹಳ ಖಾಯಿಲೆಯಿಂದ ನರಳಿದೆ. ಆಗ ಮಠದಲ್ಲಿ ಚಿಕಿತ್ಸೆಯ ಸೌಲಭ್ಯವಿರಲಿಲ್ಲ. ಮಹಾಪುರುಷ್ ಮಹಾರಾಜರು ನನಗೆ ಹೇಳಿದರು, "ನೀನು ಈಗ ಮನೆಗೆ ಹೋಗಿ, ಸರಿಯಾಗಿ ಪಥ್ಯ–ಊಟಗಳನ್ನು ಮಾಡು. ಚಿಕಿತ್ಸೆಯನ್ನೂ ಮಾಡಿಸಿಕೊ. ಇಲ್ಲಿ ಸರಿಯಾದ ಊಟವೂ ಇಲ್ಲ; ಚಿಕಿತ್ಸೆಗೂ ಅನುಕೂಲವಿಲ್ಲ." ನಾನು ಮನೆಗೆ ಹಿಂತಿರುಗಿದೆ. ನಿಧಾನವಾಗಿ ಆರೋಗ್ಯವಂತನಾದೆ. ಆದರೆ ಮನೆಯ ಕೆಲಸದ ಒತ್ತಡ, ಅದಕ್ಕೂ ಹೆಚ್ಚಾಗಿ ವೃದ್ಧರಾದ ತಂದೆತಾಯಿಯರ ಒತ್ತಡದಿಂದ ಬೇಲೂರುಮಠಕ್ಕೆ ಮರಳಲಾಗಲಿಲ್ಲ. ಪರಿಸ್ಥಿತಿಯನ್ನು ವಿವರಿಸಿ ಮಹಾಪುರುಷ್ ಮಹಾರಾಜರಿಗೆ ಕಾಗದ ಬರೆದೆ. ಅವರು ನನಗೆ ಹೀಗೆ ಉತ್ತರ ಬರೆದರು: "ಇದೇ ಮಾತೆಯವರ ಇಚ್ಛೆಯೆಂದು ತಿಳಿದುಕೋ. ಮನೆಯಲ್ಲಿಯೇ ಇದ್ದುಕೊಂಡು, ತಂದೆತಾಯಿಯರ ಸೇವೆಯನ್ನು ಮಾಡು. ಒಳ್ಳೆಯ ಗೃಹಸ್ಥನಾಗು. ಒಳ್ಳೆಯ ಗೃಹಸ್ಥರೂ ನಮಗೆ ಬೇಕಾಗಿದ್ದಾರೆ. ಇಲ್ಲದಿದ್ದರೆ, ಠಾಕೂರರ ಪರಿವಾರ ಹೇಗೆ ತಾನೇ ನಡೆಯುತ್ತದೆ?" ಶ್ರೀಮಾತೆಯವರನ್ನು ಪುನಃ ನಾನು ದರ್ಶಿಸಲಾಗಲಿಲ್ಲ. ಆದರೆ ನನಗೆ ಆದ ಆ ಒಂದು ಸಾಮಾನ್ಯ ದರ್ಶನವೇ ನನ್ನ ಜೀವನದ ಒಂದು ಪ್ರಮುಖ ಆಸರೆಯಾಗಿ ಇಂದಿಗೂ ಉಳಿದುಬಂದಿದೆ.

(ಆಧಾರ: *ಮಾಯೇರ್ ಪದಪ್ರಾಂತೇ*)

## ಶ್ರೀರಾಮಕೃಷ್ಣ ಸಂಭಾಷಣ ಸುಧೆ

ಭಕ್ತ: **"ಮಹಾಶಯರೆ, ಪಾಪಬುದ್ಧಿ ಏಕೆ ಬರುತ್ತದೆ?"** ಶ್ರೀರಾಮಕೃಷ್ಣರು: "ಆತನ ಸೃಷ್ಟಿಯಲ್ಲಿ ಎಲ್ಲವೂ ಇದೆ. ಸಾಧುಗಳನ್ನು ಆತನೇ ಸೃಷ್ಟಿಸಿದ್ದಾನೆ; ದುಷ್ಟರನ್ನೂ ಆತನೇ ಸೃಷ್ಟಿಸಿದ್ದಾನೆ. ಸದ್ಬುದ್ಧಿ ಕೊಡುವವನೂ ಅವನೇ; ದುರ್ಬುದ್ಧಿ ಕೊಡುವವನೂ ಅವನೇ."

ಭಕ್ತ: "ಹಾಗಾದರೆ, ಪಾಪಕಾರ್ಯಕ್ಕೆ ನಾವೇನೂ ಹೊಣೆಗಾರರಲ್ಲ, ಅಲ್ಲವೆ?" ಶ್ರೀರಾಮಕೃಷ್ಣರು: "ಭಗವಂತನ ನಿಯಮ, ಪಾಪ ಮಾಡಿದೆ ಎಂದರೆ ಅದರ ಫಲ ಅನುಭವಿಸಲೇಬೇಕಾಗುತ್ತದೆ. ಮೆಣಸಿನಕಾಯಿ ತಿಂದರೆ ಬಾಯಿಗೆ ಖಾರ ಹತ್ತುವುದಿಲ್ಲವೆ? ಮಥುರಬಾಬು ಯೌವನದಲ್ಲಿ ಏನೇನೋ ಮಾಡಿದ್ದ; ಆದ್ದರಿಂದ ಕೊನೆಗಾಲದಲ್ಲಿ ಆತನಿಗೆ ರೋಗ ಬಂತು.

"ಯೌವನಾವಸ್ಥೆಯಲ್ಲಿ ಇದು ಗೊತ್ತಾಗದೆ ಹೋಗಬಹುದು. ಕಾಳೀದೇವಾಲಯದಲ್ಲಿ ಅಡಿಗೆಗೆ ಸೌದೆ ಉಪಯೋಗಿಸುವುದನ್ನು ನೋಡಿದ್ದೇನೆ. ಮೊದಮೊದಲು ಸೌದೆ ನೆನೆದಿದ್ದರೂ ಚೆನ್ನಾಗಿ ಉರಿಯುತ್ತದೆ; ಅದರಲ್ಲಿ ನೀರಿರುವ ಹಾಗೇ ತೋರುವುದಿಲ್ಲ. ಆದರೆ ಸಾಕಾದಷ್ಟು ಉರಿಯುವುದರೊಳಗೆ ನೀರು ಅದರ ತುದಿಗೆ ಬಂದುಬಿಟ್ಟಿರುತ್ತದೆ. ಕೊನೆಗೆ 'ಚೊಯ್ಞ್ ಚೊಯ್ಞ್' ಅಂತ ನೀರು ಸೌದೆಯಿಂದ ಹೊರಕ್ಕೆ ಬಂದು ಒಲೆಯನ್ನು ಆರಿಸಿಬಿಡುತ್ತದೆ.

"ಆದ್ದರಿಂದ ಕಾಮ, ಕ್ರೋಧ, ಲೋಭ ಇವುಗಳ ಸಂಬಂಧವಾಗಿ ಬಹಳ ಎಚ್ಚರಿಕೆಯಿಂದಿರಬೇಕು. ಉದಾಹರಣೆಗೆ ಹನುಮಂತನನ್ನು ತೆಗೆದುಕೊ. ಕೋಪಗೊಂಡು ಲಂಕೆಗೆ ಬೆಂಕಿ ಹಾಕಿಬಿಟ್ಟ. ಕೊನೆಗೆ ಯೋಚನೆ ಬಂತು. ಅಶೋಕವನದಲ್ಲಿ ಸೀತೆ ಇದ್ದಾಳಲ್ಲ ಏನು ಗತಿ, ಆಕೆಗೆ ಏನಾದರೂ ಆಗಿಬಿಟ್ಟರೆ, ಮುಂದೇನು ಗತಿ ಎಂಬುದಾಗಿ ಚಡಪಡಿಸಲಾರಂಭಿಸಿದ."

ಭಕ್ತ: "ಭಗವಂತ ದುಷ್ಟರನ್ನೇಕೆ ಸೃಷ್ಟಿಮಾಡಿದ?" ಶ್ರೀರಾಮಕೃಷ್ಣರು: "ಆತನ ಇಚ್ಛೆ. ಆತನ ಲೀಲೆ. ಆತನ ಮಾಯೆಯಲ್ಲಿ ವಿದ್ಯೆಯೂ ಇದೆ. ಅಂಧಕಾರದ ಆವಶ್ಯಕತೆಯೂ ಇದೆ. ಅದು ಬೆಳಕಿನ ಮಹತ್ತನ್ನು ಇನ್ನೂ ಹೆಚ್ಚಾಗಿ ಪ್ರಕಾಶಗೊಳಿಸುತ್ತದೆ. ಕಾಮ, ಕ್ರೋಧ, ಲೋಭ ಇವು ಕೆಟ್ಟವೇನೊ ನಿಜ. ಹಾಗಾದರೇಕೆ ಅವನ್ನು ಸೃಷ್ಟಿಸಿದ್ದಾನೆ ಅಂತೀಯೊ? ಮಹಾಪುರುಷರನ್ನಾಗಿ ತಯಾರು ಮಾಡಲು. ಇಂದ್ರಿಯಗಳನ್ನು ಗೆದ್ದರೆ ಮನುಷ್ಯ ಮಹಾಪುರುಷನಾಗುತ್ತಾನೆ. ಜಿತೇಂದ್ರಿಯನ ಕೈಯಲ್ಲಿ ಏನು ತಾನೇ ಸಾಧ್ಯವಿಲ್ಲ? ಭಗವಂತನ ಸಾಕ್ಷಾತ್ಕಾರವೂ ಆತನ ಕೃಪೆಯಿಂದ ದೊರೆತುಬಿಡುತ್ತದೆ. ಮತ್ತೆ ಬೇರೆ ದೃಷ್ಟಿಯಿಂದ ನೋಡು. ಕಾಮದಿಂದಲೇ ಆತನ ಸೃಷ್ಟಿ–ಲೀಲೆ ಮುಂದುವರಿಯುತ್ತದೆ.

"ಪ್ರತಿಯೊಂದರ ಆವಶ್ಯಕತೆಯೂ ಇದೆ. ಒಮ್ಮೆ ಸೀತೆ ರಾಮನಿಗೆ ಹೇಳಿದಳು: 'ರಾಮ, ಅಯೋಧ್ಯೆಯಲ್ಲಿನ ಪ್ರತಿಯೊಂದು ಮನೆಯೂ ಅರಮನೆಯಂತಿದ್ದರೆ ಚೆನ್ನಾಗಿರುತ್ತದೆ! ಅನೇಕ ಮನೆ ನೋಡುತ್ತೇನೆ. ಹರಕಲು–ಮುರುಕಲು, ಬಹಳ ಹಳೆಯವು.'

ರಾಮ ಹೇಳಿದ: 'ಸೀತೆ, ಎಲ್ಲಾ ಮನೆಗಳೂ ಸುಂದರವಾದುವೇ ಆಗಿಬಿಟ್ಟರೆ, ಮೇಸ್ತ್ರಿಗಳ ಗತಿ?' (ನಗು). ಭಗವಂತ ಎಲ್ಲಾ ರಕಮುವಾರಿ ಸೃಷ್ಟಿಸಿದ್ದಾನೆ – ಒಳ್ಳೆ ಮರ, ವಿಷದ ಗಿಡ, ಜೊತೆಗೆ ಜೊಂಡು ಕೂಡ. ಪ್ರಾಣಿಗಳಲ್ಲಿಯೂ ಒಳ್ಳೇದು, ಕೆಟ್ಟದು ಎಲ್ಲಾ ಇವೆ – ಹುಲಿ, ಸಿಂಹ, ಹಾವು ಎಲ್ಲಾ."

(ಸಂಗ್ರಹ: ಕುಮಾರಿ *ಸ್ವರ್ಣಗೌರಿ*)

# ಪುಷ್ಪ ೨ – ಸ್ವಾಮಿ ಯೋಗಾನಂದ

ಡಾ. ಕೆ. ಅನಂತರಾಮು

ಶ್ರೀರಾಮಕೃಷ್ಣ ಪರಮಹಂಸರ ನೇರ ಶಿಷ್ಯಕೋಟಿಯಲ್ಲಿ ಯೋಗಾನಂದರು ಅತ್ಯಂತ ತೇಜಸ್ವಿಯೂ ಸಂಕೋಚಶೀಲರೂ ಅಂತರ್ಮುಖಿಯೂ ಭಾವನಾಜೀವಿಯೂ ಸ್ಫುರದ್ರೂಪಿಯೂ ಆಗಿದ್ದರು. ಪರಮಹಂಸರ ಪುಷ್ಪವಾಟಿಕೆಯಲ್ಲಿ ಅವರನ್ನು ಪಾರಿಜಾತಪುಷ್ಪಕ್ಕೆ ಹೋಲಿಸಬಹುದು. ಅದರ ಕೋಮಲತೆಯೇನು, ಅದರ ನೆರುಗಂಪೇನು! ಪಾರಿಜಾತವೆಂದರೆ ಅದು ದೇವಲೋಕದಿಂದ ಧರೆಗಿಳಿದ ಕುಸುಮವಲ್ಲವೇ! ಕೇವಲ ೩೮ ವರ್ಷಗಳಷ್ಟು ಕಾಲ ಬಾಳಿ ಬದುಕಿದ ಆ ಯೋಗೇನ್ ಎಂಬ ಕೋಮಲಕುಸುಮವು ಬೀರಿದ ಪರಿಮಳವು ಮಾತ್ರ ಅಪೂರ್ವವಾದುದು. "ನೀನು ಅಸಾಮಾನ್ಯ ಪುರುಷನಪ್ಪಾ, ದ್ವಾಪರಯುಗದಲ್ಲಿ ಜನಿಸಿದ್ದ ಅರ್ಜುನನೇ ಈಗ ನೀನಾಗಿದ್ದೀಯೆ. ಕರ್ಮಬಂಧನವಿಲ್ಲದ ಈಶ್ವರಕೋಟಿಗೆ ಸೇರಿದವನು ನೀನು. ನಮ್ಮಿಬ್ಬರ ನಡುವೆ ಪರಿಚಯವೇರ್ಪಟ್ಟಿರುವುದೇ ಒಂದು ವಿಸ್ಮಯವಪ್ಪಾ, ಅಧ್ಯಾತ್ಮಜೀವಿಯೊಂದರ ಎಲ್ಲ ಲಕ್ಷಣಗಳೂ ನಿನ್ನಲ್ಲಿವೆ. ಆ ಹಾದಿಯಲ್ಲಿ ನೀನು ಖಂಡಿತವಾಗಿಯೂ ಗುರಿಮುಟ್ಟುತ್ತೀಯೆ" ಎಂದು ಪರಮಹಂಸರು ಯೋಗಾನಂದರ ಭವಿಷ್ಯವನ್ನು ಪ್ರಾರಂಭದಲ್ಲಿಯೇ ನುಡಿದುಬಿಟ್ಟಿದ್ದರು.

**ಪ್ರಾರಂಭಿಕ ಜೀವನ:** ಸ್ವಾಮಿ ಯೋಗಾನಂದರು ಕೊಲ್ಕತಾದ ನವೀನಚಂದ್ರ ರಾಯ್ ಚೌಧುರಿ ಅವರ ಹಿರಿಯಮಗನಾಗಿ ೧೮೬೧ರ ಮಾರ್ಚ್ ೩೦ರಂದು ಪರಮಹಂಸರ ಲೀಲಾಭೂಮಿಯಾದ ದಕ್ಷಿಣೇಶ್ವರದಲ್ಲಿ ಅವತರಿಸಿದರು. ಯೋಗೇಂದ್ರನಾಥರಾಯ್ ಚೌಧುರಿ ಎಂಬುದು ಅವರ ಜನ್ಮನಾಮವಾಗಿತ್ತು. 'ಯೋಗೇಂದ್ರ' ಎಂಬುದು ಕೇವಲ ಅಂಕಿತನಾಮವಾಗದೆ ಮುಂದೆ ಅನ್ವರ್ಥನಾಮವೂ ಆಗಿ ಪರಿಣಮಿಸಿತೆಂಬುದು ಸೋಜಿಗವೇ ಸರಿ. ಐದು ವರ್ಷದ ಬಾಲಕರಾಗಿದ್ದಾಗಲೇ ಯೋಗಾನಂದರು ಆಟವಾಡುತ್ತಿರುವಾಗಲೇ, ಗೆಳೆಯರಿಂದ ಬೇರ್ಪಟ್ಟು ಅಂತರ್ಮುಖಿಗಳಾಗಿ ಕುಳಿತುಬಿಡುತ್ತಿದ್ದರು. "ನಾನು ಈ ಲೋಕಕ್ಕೆ ಯಾವುದೋ ನಕ್ಷತ್ರಲೋಕದಿಂದ ಬಂದವನಾಗಿರಬೇಕು. ನನ್ನೊಡನೆ ಆಟವಾಡುತ್ತಿರುವ ಗೆಳೆಯರಾರೂ ನನ್ನವರಲ್ಲ. ನಾವೀಗ ಕಾಣುತ್ತಿರುವುದೆಲ್ಲ ಒಂದು ಕನಸೋ ಹೇಗೆ" ಎಂದು ಭಾವಮಗ್ನರಾಗಿಬಿಡುತ್ತಿದ್ದರು.



ಉಪನಯನವಾದ ಮೇಲೆ ಯೋಗಾನಂದರು ತಮ್ಮ ಶಾಲೆಯ ಚಟುವಟಿಕೆಗಳ ಜೊತೆಗೆ ಒಂದಷ್ಟು ಕಾಲವನ್ನು ದೇವರ ಪೂಜೆಗೂ ಜಪತಪಾದಿಗಳಿಗೂ ವಿನಿಯೋಗಿಸುತ್ತಿದ್ದರು. ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಧರ್ಮಗ್ರಂಥಗಳನ್ನು ಇಷ್ಟಪಟ್ಟು ಓದುತ್ತಿದ್ದರಲ್ಲದೆ, ಅವುಗಳಲ್ಲಿನ ಬೋಧಪ್ರದವಾದ ಶ್ಲೋಕಗಳನ್ನು ಕಂಠಪಾಠ ಮಾಡಿಕೊಳ್ಳುತ್ತಿದ್ದರು. ಚಿಕ್ಕವಯಸ್ಸಿನಲ್ಲಿಯೇ ಅವರು ತಮ್ಮ ಪರಿಸರದಲ್ಲಿಯೇ ಇದ್ದ ಪರಮಹಂಸರನ್ನು ನೋಡುತ್ತಿದ್ದರು. ದಕ್ಷಿಣೇಶ್ವರದ ಹೂದೋಟಕ್ಕೆ ಹೋಗಿದ್ದಾಗ ಒಮ್ಮೆ ಪರಮಹಂಸರು ಅಲ್ಲಿಯೇ ನಿಂತಿದ್ದರು. ಬಾಲಕ ಯೋಗಾನಂದರು ಪರಮಹಂಸರನ್ನು ತೋಟದ ಮಾಲಿಯಿರಬಹುದು ಎಂದು ಭಾವಿಸಿಕೊಂಡು, "ನನಗಷ್ಟು ಹೂವು ಕೊಯ್ದುಕೊಡುತ್ತೀರಾ?" ಎಂದು ಕೇಳಿದರು. ಪರಮಹಂಸರು ಮಮತೆಯಿಂದ ಕೊಯ್ದುಕೊಟ್ಟರು. ಆಗಲೇ ಪರಮಹಂಸರಿಗೆ, "ಇದು ನನ್ನ ತೋಟದ ಹೂವೇ ಸರಿ" ಎಂದು ಮನವರಿಕೆಯಾಗಿಬಿಟ್ಟಿರಬೇಕು.

ಹೀಗೆ ಅದೆಷ್ಟೋ ವರ್ಷಗಳು ಉರುಳಿಹೋದವು. ಯೋಗಾನಂದರು ಮಿಷನ್ ಸ್ಕೂಲೊಂದರಲ್ಲಿ ವಿದ್ಯಾಭ್ಯಾಸ ಮಾಡುತ್ತ, ಎಂಟ್ರೆನ್ಸ್ ತರಗತಿಗೆ ಕಾಲಿಟ್ಟರು. ಆಗಲೇ ಬ್ರಾಹ್ಮಸಮಾಜದ ಪ್ರಮುಖರಾದ ಕೇಶವಚಂದ್ರಸೇನರ ಭಾಷಣಗಳನ್ನು ಕೇಳಲು ಹೋಗುತ್ತಿದ್ದರು. ಅವರು ಪ್ರಕಟಿಸುತ್ತಿದ್ದ, 'ಸುಲಭಸಮಾಚಾರ್' ಪತ್ರಿಕೆಯಲ್ಲಿ ಕೇಶವಚಂದ್ರಸೇನರೇ ಬರೆದಿದ್ದ, ಪರಮಹಂಸರನ್ನು ಕುರಿತ ಲೇಖನವೊಂದನ್ನು ಓದಿ ತುಂಬಾ ಪ್ರಭಾವಿತರಾದರು. ತಾವು, 'ತೋಟದ ಮಾಲಿ'

ಎಂದು ಭಾವಿಸಿದ್ದ, ಅರಿಯದವರು 'ಹುಚ್ಚು ಬ್ರಾಹ್ಮಣ' ಎಂದು ಪಟ್ಟವನ್ನು ಕಟ್ಟಿದ್ದ, ಪರಮಹಂಸರ ದರ್ಶನ ಪಡೆದು, ಅವರ ಪ್ರೇಮಪೂರ್ಣವಾದ ಮಾತುಗಳನ್ನಾಲಿಸಿ, ಅವರಿಗೇ ತಮ್ಮನ್ನು ಸಮರ್ಪಿಸಿಕೊಳ್ಳಲು ನಿರ್ಧರಿಸಿಬಿಟ್ಟರು.

**ಬಲವಂತದ ಮಾಘಸ್ನಾನ:** ಎಂಟ್ರೆನ್ಸ್ ಪರೀಕ್ಷೆ ಮುಗಿಯುತ್ತಿದ್ದಂತೆಯೇ ತಂದೆತಾಯಿಗಳು ಮಗನನ್ನು ಅಧ್ಯಾತ್ಮ ಜೀವನದಿಂದ ವಿಮುಖಗೊಳಿಸುವ ಸಲುವಾಗಿ ಮದುವೆಯ ಏರ್ಪಾಡುಗಳನ್ನು ಗುಟ್ಟಾಗಿ ಮಾಡಿಯೇಬಿಟ್ಟರು. ದಕ್ಷಿಣೇಶ್ವರಕ್ಕೆ ಸಮೀಪದಲ್ಲಿಯೇ ಇದ್ದ ಮಧುಸೂದನ ರಾಯ್ ಅವರ ಚೆಲುವೆಯಾದ ಮಗಳನ್ನು ತಂದುಕೊಳ್ಳುವುದೆಂದು ಮಾತುಕತೆಗಳು ನಡೆದುಹೋದವು. ವಿಷಯ ತಿಳಿಯುತ್ತಿದ್ದಂತೆ ಯೋಗಾನಂದರು ಕ್ಷೋಭೆಗೊಂಡರು. "ನನಗೆ ಮದುವೆ ಬೇಡವೇ ಬೇಡ" ಎಂದು ಇಲ್ಲಿ ಬಿದ್ದು, ಅಲ್ಲಿ ಎದ್ದರು. "ಇದು ಕುಟುಂಬದ ಗೌರವದ ಪ್ರಶ್ನೆ, ಮಾತುಕೊಟ್ಟಾಗಿದೆ ಮಗನೇ, ನಿನಗಿಷ್ಟವಿಲ್ಲದಿದ್ದರೂ ನೀನು ಮದುವೆಯಾಗಲೇಬೇಕು" ಎಂದು ತಾಯಿ ಕಣ್ಣೀರು ಹರಿಸತೊಡಗಿದಳು. ಮೃದುಮಧುರ ಸ್ವಭಾವದ ಯೋಗಾನಂದರು ತಾಯಿಯ ಕಣ್ಣೀರಿನಲ್ಲಿ ಕರಗಿಹೋದರು. ಬಲವಂತದ ಮಾಘಸ್ನಾನ ನಡೆದೇಹೋಯಿತು.

ವಿವಾಹ ನೆರವೇರಿದ್ದೊಂದಾಯಿತೇ ಹೊರತು ಸಾಂಸಾರಿಕ ಜೀವನ ಒಮ್ಮೆಯೂ ಘಟಿಸಲಿಲ್ಲ. ಆ ವಿಷಯದಲ್ಲಿ ಅವರು ಪರಮಹಂಸರಂತೆಯೇ ಆಗಿಬಿಟ್ಟರು. "ಭಗವಂತನ ಸಾಕ್ಷಾತ್ಕಾರದ ಮಾತು ಇನ್ನೆಲ್ಲಿ ಬಂತು, ನನ್ನ ದಾಕ್ಷಿಣ್ಯಪ್ರವೃತ್ತಿಯೇ ನನ್ನನ್ನು ಹಾಳುಮಾಡಿತು. ಇನ್ನು ಯಾವ ಮುಖವನ್ನು ಹೊತ್ತು ಪರಮಹಂಸರ ಬಳಿಗೆ ಹೋಗಲಿ? ಹೋಗಿ ಪ್ರಯೋಜನವಾದರೂ ಏನು, ನಾನು ಎಷ್ಟು ಬೇಗ ಸತ್ತರೆ ಅಷ್ಟು ಒಳ್ಳೆಯದು" ಎಂದು ಘೋರಪರಿತಾಪದಲ್ಲಿ ಅವರು ಮುಳುಗಿಹೋದರು.

ಪರಮಹಂಸರಿಗೆ ಎಲ್ಲವೂ ತಿಳಿದುಹೋಯಿತು. ಉಪಾಯದಿಂದ ಯೋಗಾನಂದರನ್ನು ತಮ್ಮಲ್ಲಿಗೆ ಬರಮಾಡಿಕೊಂಡರು. "ಮದುವೆಯಿಂದ ಸರ್ವನಾಶವಾಯಿತು ಎಂದು ದುಃಖಿಸುತ್ತೀಯಾ. ನಾನೂ ಮದುವೆಯಾಗಿಲ್ಲವೇ, ಅದರಿಂದೇನಾಯಿತು? ನೀನು ಗೃಹಸ್ಥನಾಗಿಯೇ ಬೇಕಾದರೂ ಇರು, ಸಂಸಾರಪರಿತ್ಯಾಗ ಮಾಡಿಯಾದರೂ ಬಾ, ನಿನ್ನ ಬಂಧನವನ್ನೆಲ್ಲ ನುಂಗಿಹಾಕಿ ಭಗವಂತನ ಸಾಕ್ಷಾತ್ಕಾರ ಪಡೆಯುವ ಮಾರ್ಗವನ್ನು ನಾನು ನಿನಗೆ ತೋರಿಸಿಕೊಡುತ್ತೇನೆ. ನಿನ್ನ ಹೆಂಡತಿಯನ್ನೊಮ್ಮೆ ಇಲ್ಲಿಗೆ ಕರೆದುಕೊಂಡು ಬಾ" ಎಂದು ಪರಮಹಂಸರು ಎದೆತಟ್ಟಿ ಹೇಳಿದರು. ಅಮೃತೋಪಮವಾದ ಆ ಮಾತುಗಳನ್ನು ಕೇಳುತ್ತಿದ್ದಂತೆಯೇ ಯೋಗಾನಂದರ ತಲೆಭಾರವೆಲ್ಲ ಇಳಿದುಹೋಯಿತು. ಅವರ ಬದುಕಿನಲ್ಲಿ ಮುಸುಕಿದ್ದ ಕಾರ್ಮೋಡವೆಲ್ಲ ಕ್ಷಣಮಾತ್ರದಲ್ಲಿ ಕರಗಿಹೋಯಿತು. ದಳದಳನೆ ಆನಂದಾಶ್ರುಗಳಿಂದ ಆಗಲೇ ಸದ್ಗುರುವಿನ ಪಾದಾಭಿಷೇಕವನ್ನು ನೆರವೇರಿಸಿಬಿಟ್ಟರು. ಸಂಸಾರತ್ಯಾಗವೇ ತಮಗಿರುವ ಮಾರ್ಗವೆಂದು ತಿಳಿಸಿಬಿಟ್ಟರು.

**ಸದ್ಗುರುವಿನ ಸನ್ನಿಧಾನ:** ಗುರುವಿನ ಆಜ್ಞೆಯಂತೆ ಯೋಗಾನಂದರು ತಮ್ಮ ಮಡದಿಯನ್ನು ಪರಮಹಂಸರ ಸನ್ನಿಧಿಗೆ ಕರೆದುಕೊಂಡು ಹೋದರು. ಪರಮಹಂಸರಾದರೋ ಆಕೆಯ ತಲೆಯ ಮೇಲೆ ಕೈಯಿಟ್ಟು, "ಮಗಳೇ, ನಿನ್ನ ಲೌಕಿಕಭಾವಗಳು ಅಳಿದುಹೋಗಲಿ. ನೀನೊಬ್ಬ ಗೃಹತಪಸ್ವಿನಿಯಾಗು. ನಿನ್ನ ಬದುಕು ಆನಂದಮಯವಾಗಿರಲಿ" ಎಂದು ಹರಸಿದರು. ಆಕೆಯ ಮನಸ್ಸೂ ಶಾಂತವಾಯಿತು.

ಪರಮಹಂಸರ ಸನ್ನಿಧಾನದಲ್ಲಿಯೇ ಯೋಗಾನಂದರು ಹೆಚ್ಚುಹೆಚ್ಚು ಕಾಲ ಕಳೆಯಲು ಪ್ರಾರಂಭಿಸಿದರು. ಸಾಂಸಾರಿಕ ಜೀವನ ನಡೆಸದೇ ಹೋದುದಕ್ಕೆ ಅವರು ತಂದೆತಾಯಿಯರ ಮೂದಲಿಕೆಗೆ ಗುರಿಯಾಗಬೇಕಾಯಿತು. ಪರಮಹಂಸರ ಶಿಕ್ಷಣಕ್ರಮ ಅಪೂರ್ವವಾಗಿತ್ತು. ಅಲ್ಲೇನೂ ತರಗತಿಗಳಿರಲಿಲ್ಲ, ಪಾಠಕ್ರಮವಿರಲಿಲ್ಲ, ಪಠ್ಯಗಳಿರಲಿಲ್ಲ, ದಿನಚರಿಯೆಂಬುದಿರಲಿಲ್ಲ. ಏನಾದರೂ ಇದ್ದರೆ ಅದೆಲ್ಲವೂ ಪರಮಹಂಸರೇ ಆಗಿದ್ದರು. ರಾತ್ರಿಯ ಹೊತ್ತಿನಲ್ಲಿ ಹಗುರವಾಗಿ ಊಟ ಮಾಡಬೇಕು, ಮಾರುಕಟ್ಟೆಗೆ ಹೋದಾಗ ಕೊಳ್ಳುವ ಪದಾರ್ಥಗಳನ್ನು ಚೆನ್ನಾಗಿ ಪರೀಕ್ಷಿಸಬೇಕು, ಬೆಲೆಯ ವಿಚಾರದಲ್ಲಿ ಚರ್ಚೆ ಮಾಡಬೇಕು, ಪುಕ್ಕಟೆಯಾಗಿ ಕೊಡುವ ಕೊಸರನ್ನು ಉಪೇಕ್ಷಿಸಬಾರದು, ಕೆಲಸಕಾರ್ಯಗಳನ್ನು ಕೈಗೆತ್ತಿಕೊಂಡಾಗ ಕಾಲಮೀರದೆ ಅಚ್ಚುಕಟ್ಟಾಗಿ ಮಾಡಬೇಕು, ದಯಾರ್ದ್ರ ಸ್ವಭಾವವು ಸಾಧನೆಗೆ ಅಡ್ಡಿಯಾಗದಂತೆ ಎಚ್ಚರವಹಿಸಬೇಕು, ಸತ್ಯಕ್ಕೆ ಬೆಂಬಲವಾಗಿ ನಿಂತು ಅದನ್ನು ಎತ್ತಿಹಿಡಿಯಬೇಕು, ಪ್ರಾಕೃತಜನರು ಹಬ್ಬಿಸುವ ತುದಿಮೊದಲಿಲ್ಲದ ಗಾಳಿಸುದ್ದಿಗಳನ್ನು ತಳ್ಳಿಹಾಕಬೇಕು, ಕಾಮಪಾಶದಿಂದ ಬಿಡುಗಡೆಗೊಳ್ಳಬೇಕಾದರೆ ಭಗವಂತನ ನಾಮಸ್ಮರಣೆಯಲ್ಲಿ ಮುಳುಗಬೇಕು ಎಂಬಂತೆ ಅದೆಷ್ಟೋ ಜೀವನಪಾಠಗಳನ್ನು ಯೋಗಾನಂದರು ಪರಮಹಂಸರ ಸನ್ನಿಧಾನದಲ್ಲಿ ಕಲಿತುಕೊಂಡರು. ಅರಿಷಡ್ವರ್ಗಗಳಿಂದ ಮೇಲೆದ್ದು ಪರಮಾತ್ಮಸಾಕ್ಷಾತ್ಕಾರ ಮಾಡಿಕೊಳ್ಳುವುದು ಹೇಗೆ, ಆತ್ಮಾನಂದದಲ್ಲಿ ನೆಲೆನಿಲ್ಲುವುದು ಹೇಗೆ ಎಂಬುದನ್ನೆಲ್ಲ ಪರಮಹಂಸರು ಚೆನ್ನಾಗಿ ತೋರಿಸಿಕೊಟ್ಟರು. "ಹಠಯೋಗವಿದ್ಯೆಯ ಸಹವಾಸ ನಿನಗೆ ಬೇಡ, ಅದನ್ನು ಕಲಿತರೆ ನಿನ್ನ ಮನಸ್ಸು ದೇಹಕ್ಕೇ ಅಂಟಿಕೊಂಡುಬಿಡುತ್ತದೆ, ಕಾಮವು ಕರಗಲು ಹರಿಸ್ಮರಣೆಯೊಂದೇ ಸಾಕು" ಎಂದು ತಿಳಿವಳಿಕೆ ನೀಡಿದರು.

**ಕಾವಿರುದ್ರಾಕ್ಷಿಗಳು:** ಪರಮಹಂಸರ ಮಾರ್ಗದರ್ಶನದಂತೆ ಸಾಧನೆಯಲ್ಲಿ ನಿರತರಾದ ಯೋಗಾನಂದರು ತಮ್ಮ

ಹಾದಿಯನ್ನು ಹಸನು ಮಾಡಿಕೊಂಡರು. ಗುರುಭಕ್ತಿಯೆಂಬುದು ಅವರಲ್ಲಿ ತುಂಬಿತುಳುಕುತ್ತಿತ್ತು. ಪರಮಹಂಸರು ಗಂಟಲು ಬೇನೆಯಿಂದ ದಿನಗಳನ್ನು ನೂಕುತ್ತಿದ್ದಾಗ, ಯೋಗಾನಂದರು ಅತ್ಯಂತ ಕಳಕಳಿಯಿಂದ ಅವರ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆಗಾಗ ಪರಮಹಂಸರು ಶಾರದಾಮಣಿದೇವಿಯವರ ಸೇವೆಗೂ ಯೋಗಾನಂದರನ್ನು ನಿಯೋಜಿಸುತ್ತಿದ್ದರು. "ಯೋಗೇನ್ ನನ್ನ ಅಂತರಂಗದ ವಲಯಕ್ಕೆ ಸೇರಿದವನು" ಎಂದು ಹೆಮ್ಮೆಪಡುತ್ತಿದ್ದ ಪರಮಹಂಸರು ಒಂದು ಸುಮುಹೂರ್ತದಲ್ಲಿ ಅವರಿಗೆ ಕಾವಿಬಟ್ಟೆ, ರುದ್ರಾಕ್ಷಿಮಾಲೆಗಳನ್ನು ತಾವೇ ಕೈಯಾರೆ ಕರುಣಿಸಿ ಆಶೀರ್ವದಿಸಿದರು.

**ಶ್ರೀಮಾತೆಯ ಪ್ರೇಮದ ಕುವರ:** ಶ್ರೀರಾಮಕೃಷ್ಣರು ಮಹಾಸಮಾಧಿಯನ್ನು ಸ್ವೀಕರಿಸಿದ ಬಳಿಕ (೧೮೮೬) ಯೋಗಾನಂದರು ಶ್ರೀಮಾತೆ ಶಾರದಾದೇವಿಯವರ ಕರಕಮಲಸಂಜಾತರಾಗಿ ಬೆಳಗುತ್ತ, ಅವರ ಪ್ರೇಮಧಾರೆಯಲ್ಲಿ ಮಿಂದು ಪುನೀತರಾದರು. ಅವರೊಡನೆ ತೀರ್ಥಯಾತ್ರೆಯಲ್ಲಿ ಪಾಲ್ಗೊಂಡರು. ಆಗ ಕೆಲವು ಭಕ್ತೆಯರೂ ಮಾತೆಯವರೊಡನಿದ್ದರು. ವೃಂದಾವನದಲ್ಲಿದ್ದಾಗ ಪರಮಹಂಸರು ಶ್ರೀಮಾತೆಯವರಿಗೂ, ಯೋಗಾನಂದರಿಗೂ ದಿವ್ಯದರ್ಶನವಿತ್ತರು, ಮುಂದೇನು ಮಾಡಬೇಕೆಂದು ಆಜ್ಞಾಪಿಸಿದರು. ಅದರಂತೆ ಶ್ರೀಮಾತೆಯವರು ತಾವೇ ಮಂತ್ರದೀಕ್ಷೆಯನ್ನಿತ್ತು ಆಶೀರ್ವದಿಸಿದರು. ತನ್ಮೂಲಕ ಯೋಗಾನಂದರು ಶ್ರೀಮಾತೆಯವರಿಂದ ಮೊತ್ತಮೊದಲು ದೀಕ್ಷೆ ಪಡೆದವರೆಂಬ ಅಗ್ಗಳಿಕೆಗೆ ಪಾತ್ರರಾದರು.

ತೀರ್ಥಯಾತ್ರೆಯ ಬಳಿಕ ಯೋಗಾನಂದರು ಕೊಲ್ಕತಾದ ವರಾಹನಗರದ ಮಠಕ್ಕೆ ಹಿಂದಿರುಗಿಬಂದರು. ವಿವೇಕಾನಂದರ ನೇತೃತ್ವದಲ್ಲಿ ಶಾಸ್ತ್ರೋಕ್ತವಾಗಿ ಸಂನ್ಯಾಸವನ್ನು ಸ್ವೀಕರಿಸಿದರು. 'ಯೋಗಾನಂದ' ಎಂಬ ಸಂನ್ಯಾಸಾಶ್ರಮನಾಮವು ಆಗ ದಕ್ಕಿತು. ಆ ಬಳಿಕವೂ ಅವರು ಶ್ರೀಮಾತೆಯವರೊಡನೆ ಒಮ್ಮೆ ಹಾಗೂ ಸ್ವತಂತ್ರವಾಗಿ ಮತ್ತೊಮ್ಮೆ, ತೀರ್ಥಯಾತ್ರೆಯನ್ನು ಕೈಗೊಂಡು ಆನಂದವನ್ನು ತುಂಬಿಕೊಂಡರು.

**ನಗೆಯ ಹರಿವು:** ಯೋಗಾನಂದರು ಏಕಾಂತವನ್ನು ಧ್ಯಾನವನ್ನೂ ತುಂಬಾ ಇಷ್ಟಪಡುತ್ತಿದ್ದರು. ಆದರೂ ಆಗಾಗ ಅವರ ಅಂತರ್ಮುಖತೆಯ ಮೊಗ್ಗು ಅರಳಿ ನಗೆಯ ಪರಿಮಳವನ್ನು ಚೆಲ್ಲುತ್ತಿತ್ತು. ಒಮ್ಮೆ ಅವರು ಭಿಕ್ಷೆಗೆಂದು ಆಲಂಬಜಾರಿನ ಒಂದು ಗುಡಿಸಲಿನ ಮುಂದೆ ನಿಂತರು. ಆ ಹೊತ್ತಿನಲ್ಲಿ ಆ ಮನೆಯ ಗೃಹಿಣಿ ಕಸ ಗುಡಿಸುತ್ತಿದ್ದರು. ದೊಡ್ಡದೊಂದು ಪೊರಕೆ ಕೈಯಲ್ಲಿತ್ತು. ಆಕೆ "ಮುಂದೆ ಹೋಗು" ಎಂದು ಹೇಳಿದ್ದರೆ ಸಾಕಾಗಿತ್ತು. ಆದರೆ ಆಕೆ ಹಾಗೆ ಮಾಡಲಿಲ್ಲ. "ಕಡಿದರೆ ಮೂರಾಳಾಗುತ್ತೀಯೆ, ದುಡಿದು ತಿನ್ನುವುದಕ್ಕೇನು ಧಾಡಿ. ಹಗಲಲ್ಲಿ ಮನೆಗಳನ್ನು ನೋಡಿಕೊಳ್ಳುವುದು, ರಾತ್ರಿಯಲ್ಲಿ ಬಂದು ಕಳ್ಳತನ ಮಾಡುವುದು" ಎಂದು ಸಿಟ್ಟಿನಿಂದ ನಿಂದಿಸುತ್ತ, ಪೊರಕೆಯನ್ನೊಮ್ಮೆ ಜೋರಾಗಿ ನೆಲಕ್ಕೆ ಘಟ್ಟಿಸಿದಳು. ಯೋಗಾನಂದರಿಗೆ ನಗೆಯುಕ್ಕಿತೇ ಹೊರತು, ಕೋಪವುಕ್ಕಲಿಲ್ಲ. ಮಠಕ್ಕೆ ಬಂದಮೇಲೆ ಆ ಘಟನೆಯನ್ನು ಎಲ್ಲರ ಮುಂದೆ ಏಕಪಾತ್ರಾಭಿನಯದ ಮೂಲಕ ರಸಮಯವಾಗಿ ಪ್ರದರ್ಶಿಸಿದರು. ಅದನ್ನು ನೋಡುತ್ತಿದ್ದವರೆಲ್ಲ ಹೊಟ್ಟೆಹುಣ್ಣಾಗುವಂತೆ ನಗುತ್ತ, ನೆಲದ ಮೇಲೆ ಉರುಳಾಡಿದರು.

**ಶುಕಮುನಿಯ ಜಿತೇಂದ್ರಿಯತೆ:** ಯೋಗಾನಂದರು ಜಿತೇಂದ್ರಿಯತೆಯಲ್ಲಿ ವ್ಯಾಸಪುತ್ರರಾದ ಶುಕಮುನಿಗಳಿಗೆ ಸರಿದೊರೆಯಾಗಿದ್ದರು. ಮಧ್ಯಪ್ರದೇಶದಲ್ಲಿ ಒಮ್ಮೆ ಅವರು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಒಂದು ಬೋಗಿಯಲ್ಲಿ ಅವರೊಬ್ಬರೇ ಕುಳಿತಿದ್ದರು. ಮಾರ್ಗಮಧ್ಯದಲ್ಲಿ ನಿಲ್ದಾಣವೊಂದರಲ್ಲಿ ರೂಪಸಿಯಾದ ಹೆಂಗಸೊಬ್ಬಳು ಆ ಬೋಗಿಗೆ ಹತ್ತಿಕೊಂಡಳು. ತರುಣರಾಗಿದ್ದ ಯೋಗಾನಂದರನ್ನು ಒಂಟಿಯಾಗಿ ಕಂಡು ಅವರೆಡೆಗೆ ಆಕರ್ಷಿತಳಾದಳು."ನನ್ನ ಸಮಸ್ತವನ್ನೂ ನಿಮಗೆ ಸಮರ್ಪಿಸಿದ್ದೇನೆ, ಸ್ವೀಕರಿಸಬೇಕು" ಎಂದು ಅಂಗಲಾಚಿದಳು. ಯೋಗಾನಂದರು ಏನೊಂದೂ ಮಾತನಾಡಲಿಲ್ಲ. ಅದರಿಂದ ಕೆರಳಿದ ಆ ಹೆಂಗಸು, "ನನ್ನ ಬಯಕೆಯನ್ನು ತಣಿಸದಿದ್ದರೆ ನೀನು ನನ್ನ ಮಾನಭಂಗ ಮಾಡಿದೆಯೆಂದು ಸರಪಳಿ ಎಳೆದು, ರೈಲು ನಿಲ್ಲಿಸಿ ಕಿರುಚಿಕೊಳ್ಳುತ್ತೇನೆ" ಎಂದು ಬೆದರಿಕೆಯೊಡ್ಡಿದಳು. ಆಗಲೂ ಯೋಗಾನಂದರು ವಿಚಲಿತರಾಗಲಿಲ್ಲ. ಕಟ್ಟಿಕೊಂಡ ಪತ್ನಿಯನ್ನೇ ತ್ಯಾಗಮಾಡಿ, ಸದ್ಗುರುವಿಗೆ ತಮ್ಮನ್ನು ಸಮರ್ಪಿಸಿಕೊಂಡಿರುವ ಈ ಶುಕಮುನಿ, ಸಾಮಾನ್ಯ ಹೆಂಗಸೊಬ್ಬಳ ಹುಚ್ಚಾಟಕ್ಕೆ ಮರುಳಾಗುತ್ತಾರೆಯೇ! ಆ ಬಳಿಕ ಆ ಹೆಂಗಸು ಮದ್ಯ ಕುಡಿದು, ಅಮಲಿಗೆ ಈಡಾದಳು. ಅಷ್ಟರಲ್ಲಿಯೇ ನಿಲ್ದಾಣವೊಂದು ಬರಲಾಗಿ, ಸ್ವಾಮಿ ಯೋಗಾನಂದರು ಬೋಗಿಯಿಂದಿಳಿದು ಕಣ್ಮರೆಯಾಗಿಬಿಟ್ಟರು.

**ಗಂಗಾತಟದಲ್ಲಿ ತಪಸ್ವಿನಿ:** ಯೋಗಾನಂದರ ಪೂರ್ವಾಶ್ರಮದ ಮಾವ ಮಧುಸೂದನ ರಾಯ್ ತಮ್ಮ ಮಗಳಿಗೆ ಸಾಂಸಾರಿಕ ಜೀವನವನ್ನು ನಡೆಸುವ ಭಾಗ್ಯವು ಒದಗಿಬರಲಿಲ್ಲವಲ್ಲಾ ಎಂದು ಆಗಾಗ ದುಃಖಾಕ್ರಾಂತರಾಗುತ್ತಿದ್ದರು. ಸಹಜವಾಗಿಯೇ ಅವರ ಹೃದಯದಲ್ಲಿದ್ದ ವೈರಾಗ್ಯ ಮತ್ತಷ್ಟು ಅರಳಿತು. ದಕ್ಷಿಣೇಶ್ವರದ ಗಂಗಾತಟದಲ್ಲಿ ಘಟ್ಟವೊಂದನ್ನು ಅವರು ರೂಪಿಸಿಕೊಂಡರು. ಅಲ್ಲಿಯೇ ಉಳಿದ ಜೀವನವನ್ನೆಲ್ಲ ಜಗನ್ಮಾತೆಯ ಉಪಾಸನೆಗೇ ಮೀಸಲಾಗಿರಿಸಿದರು. ಯೋಗೇನದು ಸಂನ್ಯಾಸಿಯ ಮನಸ್ಸು ಎಂಬುದನ್ನು ಅರಿತರಿತೂ ತಮ್ಮ ಮಗಳನ್ನು ಮದುವೆ ಮಾಡಿಕೊಟ್ಟದ್ದು ತಪ್ಪಾಯಿತು